**ದಿನಾಂಕ 07-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 3 ನೇ ಎದುರುದಾರರ ಪರ ಶ್ರೀ ಎಂ ಆರ್ ವಕೀಲರಿಂದಃ**

ಈ ಅಪಘಾತದಲ್ಲಿ ನನಗೆ ತಲೆಗೆ ಪೆಟ್ಟಾಗಿ ಮೂರ್ಚೆ ಹೋಗಿರುವುದಿಲ್ಲ . ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಪೊಲೀಸರಿಗೆ ದೂರನ್ನು ಅದೇ ದಿನ ಕೊಟ್ಟಿರುತ್ತೇನೆ . ನಾನು ದೂರನ್ನು ಪರಿಹಾರ ಪಡೆಯುವ ಉದ್ದೇಶದಿಂದ ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರಿದು ನನನ್ನ ಕಾಲಿಗೆ ಪ್ಲೇಟ್ ನ್ನು ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ . ದೂರನ್ನು ನೀಡುವ ಸಮಯದಲ್ಲಿ ವೈದ್ಯರು ನನ್ನ ವೈದ್ಯಕೀಯ ಖರ್ಚಿಗಾಗಿ ಹೆಚ್ಚಿನ ಹಣ ಬೇಕಾಗುತ್ತದೆ ಎಂದು ಹೇಳಿದ್ದರು . ನಾನು ಬಿಎ ವ್ಯಾಸಾಂಗ ಮಾಡಿರುತ್ತೇನೆ . ನಾನು ಸ್ಟಾರ್ ಹೆಲ್ತ್ ಇನ್ಸುರೆನ್ಸ್ ನಲ್ಲಿ ಸೇಲ್ಸ್ ಮ್ಯಾನೇಜರ್ ಆಗಿದ್ದೇನೆ . ನಾನು ಖರ್ಚು ಮಾಡಿದ ವೈದ್ಯಕೀಯ ವೆಚ್ಚ ಸ್ಟಾರ್ ಹೆಲ್ತ್ ಇನ್ಸುರೆನ್ಸ್ ನಿಂದ ಬಂದಿರುತ್ತದೆ . ವೈದ್ಯಕೀಯ ವೆಚ್ಚ ಬಿಟ್ಟು ಉಳಿದ ಪರಿಹಾರವನ್ನು ನ್ಯಾಯಾಲಯದ ಮುಖೇನ ಪಡೆಯಬೇಕು ಎನ್ನುವ ಮಾಹಿತಿ ನನಗೆ ಇತ್ತು . ಇದರ ಬಗ್ಗೆ ನಾನು ನಮ್ಮ ವಕೀಲರನ್ನು ಸಂಪರ್ಕಿಸಿ ಮಾಹಿತಿ ಪಡೆದಿರುತ್ತೇನೆ. ನಾನು ಪ್ರಥಮವಾಗಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 3 ತಿಂಗಳು ವಿಶ್ರಾಂತಿ ಪಡೆದಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ವೈದ್ಯರಿಂದ ದಾಖಲಾತಿಯನ್ನು ಪಡೆದಿರುತ್ತೇನೆ. ಮುಖ್ಯವಿಚಾರಣೆಯಲ್ಲಿ ಡಿ.ಎ.ಆರ್ ವರದಿಯನ್ನು ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿದ್ದಾರೆ ಎಂದು ನಾನು ತಿಳಿಸಿದ್ದು ಈ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಸ್ಟಾರ್ ಹೆಲ್ತ್ ಇನ್ಸುರೆನ್ಸ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ನ್ಯಾಯಾಲಯಕ್ಕೆ ಎಷ್ಟು ದಿನಗಳ ಒಳಗಾಗಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಬೇಕು ಎನ್ನುವ ಜ್ಞಾನ ನನಗೆ ಇತ್ತು ಎಂದರೆ ಸರಿ . ನಾನು ನನ್ನ ಬೇಜವಬ್ದಾರಿಯಿಂದ ನನ್ನ ಪರಿಹಾರ ಅರ್ಜಿಯನ್ನು ನ್ಯಾಯಾಲಯದ ಮುಂದೆ ತಡವಾಗಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯನ್ನು ತಡವಾಗಿ ಸಲ್ಲಿಸಲು ಸಕಾರಣವನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ . ನಿಗದಿತ ಅವಧಿ ಮೀರಿದ ನಂತರ ನಾನು ಅರ್ಜಿಯನ್ನು ಸಲ್ಲಿಸಿದ್ದರಿಂದ ನನ್ನ ಅರ್ಜಿ ವಜಾಗೊಳ್ಳತಕ್ಕದ್ದು ಎಂದರೆ

ಸರಿಯಲ್ಲ. ನನ್ನ ಅರ್ಜಿ ಕಾಲಮಿತಿ ಮೀರಿದ್ದರಿಂದ ನನ್ನ ಅರ್ಜಿ ಊರ್ಜಿತವಾಗತಕ್ಕದಲ್ಲ ಮತ್ತು ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.